# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 932 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 18-12-2018 |
| ಉತ್ತರಿಸಬೇಕಾದ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ಹೆಚ್-1 ಎನ್-1 ವ್ಯಾಪಕವಾಗಿ ಹರಡಿದ್ದು, ಕಳೆದ ಒಂದು ವರ್ಷದಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ 01-01-2018 ರಿಂದ 10-12-2018 ವರೆಗೆ 1553 ಪ್ರಕರಣಗಳು ಅಧಿಕೃತ ಪ್ರಯೋಗಾಲಯಗಳಿಂದ ದೃಢೀಕೃತಗೊಂಡು ವರದಿಯಾಗಿವೆ.<br>ಜಿಲ್ಲಾವಾರು ಮಾಹಿತಿಗಳನ್ನು ಅನುಬಂಧ(1) ರಲ್ಲಿ ನೀಡಲಾಗಿದೆ. |
| ಆ) | ಹೆಚ್-1ಎನ್-1 ರೋಗದ ಗುಣಲಕ್ಷಗಳೇನು: | ತೀವ್ರ ಸ್ವರೂಪದ ಜ್ವರ, ನಗಡಿ ಮತ್ತು ಗಂಟಲು ನೋವು, ಕೆಮ್ಮು, ಭೇದಿ/ವಾಂತಿ, ಅತೀಯಾದ ಮೈಕೈ ನೋವು ಮತ್ತು ತಲೆ ನೋವು, ಉಸಿರಾಟದ ತೊಂದರೆ ಇವುಗಳು ಹೆಚ್1ಎನ್1 ರೋಗದ ಲಕ್ಷಣಗಳಾಗಿವೆ. |
| ಇ) | ಹೆಚ್-1ಎನ್-1 ರೋಗದ ತಡೆಯುವಲ್ಲಿ ಆರೋಗ್ಯ ಸಂಸ್ಥೆಗಳು ತೆಗೆದುಕೊಂಡ ಮುನ್ನಚ್ಚರಿಕೆ ಕ್ರಮಗಳೇನು? (ವಿವರ ನೀಡುವುದು) | ಹೆಚ್1ಎನ್1 ಕಾಯಿಲೆಗೆ ಸೂಕ್ತ ಚಿಕಿತ್ಸೆ ನೀಡಲು ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಸುಸಜ್ಜಿತ 5 ಹಾಸಿಗೆಯುಳ್ಳ ವಾರ್ಡನ್ನು ಕಾಯ್ದಿರಿಸಲಾಗಿದೆ. ಎಲ್ಲಾ ಜಿಲ್ಲೆಗಳಲ್ಲಿರುವ ಹೆಚ್1ಎನ್1 ಸೋಂಕಿನ ವ್ಯಕ್ತಿಯ ಗಂಟಲಿನ ದ್ರವ ಮಾದರಿಗಳನ್ನು ಉಚಿತವಾಗಿ ಪರೀಕ್ಷೆ ಮಾಡಲಾಗುತ್ತಿದೆ. ದೃಢೀಕರಿಸಲಟ್ಟ ಎಲ್ಲಾ ರೋಗಿಗಳಿಗೆ ಸರಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಸೊಂಕಿಗೆ ನೀಡಲಾಗುವ ಟಾಮಿಫ್ಲೂ ಮಾತ್ರೆಗಳು ಎಲ್ಲಾ ತಾಲ್ಲೂಕು ಆಸ್ಪತ್ರೆ ಸಮುದಾಯ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ದಾಸ್ತಾನು ಲಭ್ಯವಿದೆ. ಇದಲ್ಲದೆ ರಾಜ್ಯ ಮಟ್ಟದಿಂದ ತೆಗೆದುಕೊಳ್ಳಲಾದ ಕ್ರಮಗಳನ್ನು ಅನುಬಂಧ (2)ರಲ್ಲಿ ನೀಡಲಾಗಿದೆ. |

(ಶಿವಾನಂದ ಎಸ್. ಪಾಟೀಲ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಸಂಖ್ಯೆ: ಆಕುಕ 932 ವಿ.ಪ. 2018

*ಅನುಬಂಧ-1*

| ಹೆಚ್1ಎನ್1 ಸೋಂಕಿಗೆ ಒಳಗಾದವರ ವಿವರಗಳು (01-01-2018 ರಿಂದ 10-2018 ವರೆಗೆ) | | |
|---|---|---|
| ಕ್ರಮ ಸಂಖ್ಯೆ | *ಜಿಲ್ಲೆಗಳ ಹೆಸರು* | *ಹೆಚ್1ಎನ್1 ಸೋಂಕಿಗೆ ಒಳಗಾದವರು* |
| 1 | ಬಿಬಿಎಂಪಿ | 350 |
| 2 | ಬೆಂಗಳೂರು ನಗರ | 144 |
| 3 | ಬೆಂಗಳೂರು ಗ್ರಾಮಾಂತರ | 11 |
| 4 | ಚಿತ್ರದುರ್ಗ | 40 |
| 5 | ದಾವಣಗೆರೆ | 59 |
| 6 | ಕೋಲಾರ | 27 |
| 7 | ಶಿವಮೊಗ್ಗ | 118 |
| 8 | ತುಮಕೂರು | 26 |
| 9 | ರಾಮನಗರ | 17 |
| 10 | ಚಿಕ್ಕಬಳ್ಳಾಪುರ | 7 |
| 11 | ಬೆಳಗಾಂ | 43 |
| 12 | ವಿಜಯಪುರ | 37 |
| 13 | ಬಾಗಲಕೋಟೆ | 31 |
| 14 | ಧಾರವಾಡ | 23 |
| 15 | ಗದಗ | 22 |
| 16 | ಹಾವೇರಿ | 22 |
| 17 | ಉತ್ತರ ಕನ್ನಡ | 22 |
| 18 | ಬಳ್ಳಾರಿ | 46 |
| 19 | ಬಿದರ | 3 |
| 20 | ಕಲ್ಬುರ್ಗಿ | 29 |
| 21 | ಯಾದಗಿರಿ | 6 |
| 22 | ಕೊಪ್ಪಳ | 17 |
| 23 | ರಾಯಚೂರು | 9 |
| 24 | ಚಿಕ್ಕಮಂಗಳೂರು | 65 |
| 25 | ದಕ್ಷಿಣ ಕನ್ನಡ | 107 |
| 26 | ಉಡುಪಿ | 110 |
| 27 | ಹಾಸನ | 67 |
| 28 | ಕೊಡಗು | 8 |
| 29 | ಮಂಡ್ಯ | 21 |
| 30 | ಮೈಸೂರು | 54 |
| 31 | ಚಾಮರಾಜನಗರ | 12 |
| **ಒಟ್ಟು** | | **1553** |

ಅನುಬಂಧ-2

## ಹೆಚ್1ಎನ್1 ಸೋಂಕು ತಡೆಗಟ್ಟಲು ಇಲಾಖೆಯು ತೆಗೆದುಕೊಂಡಿರುವ ಮುಂಜಾಗ್ರತಾ ಕ್ರಮಗಳು

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಹೆಚ್ಚಾಗಿ ಶ್ವಾಸಕೋಶದ ಸೋಂಕು (Acute Respiratory Infection) ಕಾಣಿಸಿಕೊಂಡು ನೆಗಡಿ, ಕೆಮ್ಮು ಜ್ವರದ ಜೊತೆಗೆ ಉಸಿರಾಟದ ತೊಂದರೆಯಿಂದ ಆಸ್ಪತ್ರೆಗಳಿಗೆ ಚಿಕಿತ್ಸೆಗಾಗಿ ದಾಖಲಾದವರನ್ನು ಪರೀಕ್ಷಿಸಿದಾಗ ಇನ್‌ಫ್ಲೂಯೆಂಜಾ ಬಿ, ಇನ್‌ಫ್ಲೂಯೆಂಜಾ ಎ (ಹೆಚ್1ಎನ್1) ಹಾಗೂ ಇನ್‌ಫ್ಲೂಯೆಂಜಾ ಹೆಚ್3ನ2 ಪತ್ತೆಯಾಗುತ್ತಿರುವುದು ಪ್ರಯೋಗಾಲಯಗಳಿಂದ ವರದಿಯಾಗುತ್ತಿವೆ.

ಜನವರಿ 2018 ರಿಂದ ದಿನಾಂಕ:10-12-2018 ವರೆಗೆ **9480** ಶಂಕಿತ ಮಾದರಿಗಳನ್ನು ಪರೀಕ್ಷಿಸಿದಾಗ **1553** ದೃಡಪಟ್ಟ ಹೆಚ್1ಎನ್1 ಪ್ರಕರಣಗಳು ಪತ್ತೆಯಾಗಿದ್ದು **59** ಮರಣಗಳು ಸಂಭವಿಸಿವೆ.

ಹೊರ ರೋಗಿಗಳ ಪ್ರತ್ಯೇಕ ವಿಭಾಗದಲ್ಲಿ (Screening room) ರೋಗಿಗಳನ್ನು ಪರೀಕ್ಷಿಸಿ, ಭಾರತ ಸರ್ಕಾರದ ಮಾರ್ಗಸೂಚಿಯಂತೆ ಶಂಕಿತ ರೋಗಿಗಳಿಗೆ ಸೂಕ್ತ ಚಿಕಿತ್ಸೆ, ಅಗತ್ಯ ಸಲಹೆ ಸೂಚನೆ, ಚಿಕಿತ್ಸಾ ನಂತರದ ಅನುಸರಣೆ ಮುಂತಾದ ಕ್ರಮಗಳನ್ನು ಕಟ್ಟು ನಿಟ್ಟಿನಲ್ಲಿ ನಡೆಸಲು ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

- ರಾಜ್ಯದಲ್ಲಿ ಬೆಂಗಳೂರಿನ ನಿಮ್ಹಾನ್ಸ್, ನಾರಾಯಣ ನೇತ್ರಾಲಯ, ಮಣಿಪಾಲ್ ಆಸ್ಪತ್ರೆ ಬೆಂಗಳೂರು, ಕಮಾಂಡ್ ಆಸ್ಪತ್ರೆ ಬೆಂಗಳೂರು ಮತ್ತು ಉಡುಪಿಯ ಮಣಿಪಾಲ್ ಆಸ್ಪತ್ರೆಯ ಪರೀಕ್ಷಾ ಕೇಂದ್ರಗಳಲ್ಲಿ ಮಾದರಿಗಳ ಪರೀಕ್ಷೆಯನ್ನು ನಡೆಸಲಾಗುತ್ತಿದೆ.

- ಹೆಚ್1ಎನ್1 ಪ್ರಕರಣಗಳು ವರದಿಯಾದ ಮನೆ ಮತ್ತು ಸುತ್ತಮುತ್ತಲಿನ ಸಾರ್ವಜನಿಕರಲ್ಲಿ ರೋಗ ಲಕ್ಷಣಗಳ ಪತ್ತೆಗಾಗಿ ಕ್ಷೇತ್ರಮಟ್ಟದಲ್ಲಿ/ವಾರ್ಡ್‌ಗಳಲ್ಲಿ ಆರೋಗ್ಯ ಕಾರ್ಯಕರ್ತರುಗಳಿಂದ **ILI Clusters** ಬಗ್ಗೆ ಸಕ್ರಿಯ ಸಮೀಕ್ಷೆ ನಡೆಸಿ ಆರೋಗ್ಯ ಶಿಕ್ಷಣವನ್ನು ನೀಡುವುದು. ಸಂಶಯಾಸ್ಪದ 'ಸಿ' ವರ್ಗದ ಪ್ರಕರಣಗಳಿದ್ದಲ್ಲಿ ಗಂಟಲಿನ ಮಾದರಿ (ಸ್ವಾಬ್) ಗಳನ್ನು ಕೂಡಲೇ ಪರೀಕ್ಷೆಗೆ ಒಳಪಡಿಸಿ, ಫಲಿತಾಂಶ ಪಡೆದು ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ.
- ರಾಜ್ಯ ಮಟ್ಟ, ಜಿಲ್ಲಾ ಮಟ್ಟ ಮತ್ತು ತಾಲ್ಲೂಕು ಮಟ್ಟದ ಕ್ಷಿಪ್ರ ಕಾರ್ಯಾಚರಣೆ ತಂಡ (**RRT**) ಗಳನ್ನು ರಚಿಸಲಾಗಿದ್ದು ತುರ್ತು ಸಂದರ್ಭಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ.
- ರೋಗ-ಲಕ್ಷಣಗಳು ಪತ್ತೆಯಾದ ನಿಕಟವರ್ತಿಗಳು ಹಾಗೂ ಖಾಯಿಲೆ ಇರುವವರಿಗೆ ಭಾರತ ಸರ್ಕಾರದ ಮಾರ್ಗಸೂಚಿಯಂತೆ 'ಬಿ' ಮತ್ತು 'ಸಿ' ವರ್ಗದ ರೋಗಿಗಳಿಗೆ ತಕ್ಷಣ ಟಾಮಿಫ್ಲೂ ಮಾತ್ರೆ ಸೇರಿದಂತೆ ಸೂಕ್ತ ಚಿಕಿತ್ಸೆ ನೀಡುವುದು 'ಎ' ವರ್ಗೀಕರಣದಲ್ಲಿರುವ ರೋಗಿಗಳನ್ನು ಅನುಸರಣೆ (Follow up) ಮಾಡಲಾಗುತ್ತಿದೆ.
- ಟಾಮಿಫ್ಲೂ ಮಾತ್ರೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಎಲ್ಲಾ ಆರೋಗ್ಯ ಸಂಸ್ಥೆ/ಆಸ್ಪತ್ರೆಗಳಲ್ಲಿ ದಾಸ್ತಾನು ಇಡುವುದು. ಹೆಚ್1ಎನ್1 ಚಿಕಿತ್ಸೆಗೆ ಬೇಕಾದ ಔಷಧಿಗಳು ಕೊರತೆಯಿದ್ದಲ್ಲಿ ***'ರಾಷ್ಟ್ರೀಯ ಆರೋಗ್ಯ ಅಭಿಯಾನದ ಉಚಿತ ಔಷಧಿ ವಿತರಣೆ'*** ಕಾರ್ಯಕ್ರಮದ ಅಡಿಯಲ್ಲಿ ಅವಶ್ಯಕತೆಗೆ ಅನುಗುಣವಾಗಿ ಔಷಧಿಗಳನ್ನು ಖರೀದಿಸಿ ಸಮರ್ಪಕವಾಗಿ ರೋಗ ನಿರ್ವಹಣೆ ಮಾಡಲು ಸೂಕ್ತ ನಿರ್ದೇಶನ ನೀಡಲಾಗಿದೆ. ಅದರಂತೆ ಎಲ್ಲಾ ಪ್ರಾ. ಆ. ಕೇಂದ್ರ ಸಮುದಾಯ ಆರೋಗ್ಯ ಕೇಂದ್ರ , ತಾಲ್ಲುಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಔಷಧಗಳು ಲಭ್ಯವಿರುತ್ತವೆ.
- ಹೆಚ್1ಎನ್1 ಸೋಂಕನ್ನು ನಿರ್ವಹಿಸುವ ಆರೋಗ್ಯ ಸಿಬ್ಬಂದಿ ಹಾಗೂ ವೈದ್ಯರುಗಳಿಗೆ ಹೆಚ್1ಎನ್1 ವಿರುದ್ಧ ಲಸಿಕೆಗಳನ್ನು ನೀಡಲು ಜಿಲ್ಲಾ ಆರೋಗ್ಯ ಮತ್ತು ಕುಕ ಅಧಿಕಾರಿಗಳಿಗೆ ಅಗತ್ಯತೆಗೆ ಅನುಗುಣವಾಗಿ ಲಸಿಕೆ ಖರೀದಿಸಲು ರೂ-25,000=00 ಸಾವಿರಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

➢ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ವರ್ಗ 'ಬಿ" ಮತ್ತು 'ಸಿ' ವರ್ಗದ ಹೆಚ್1ಎನ್ ಸೋಂಕಿನವರನ್ನು ಗುರುತಿಸಿ, ಅವರ ವಿಳಾಸ, ದೂರವಾಣಿ ಸಂಖ್ಯೆ ಇತ್ಯಾದಿ ವಿವರಗಳನ್ನು ರಾಜ್ಯದ ಸಹಾಯವಾಣಿ ಕೇಂದ್ರದ ಸಂಖ್ಯೆ:104 ಇವರಿಗೆ ಪ್ರತಿ ದಿನ ನೀಡುವಂತೆ ಯೋಜನಾ ನಿರ್ದೇಶಕರು (ಐಡಿಎಸ್‌ಪಿ) ಇವರಿಂದ ದಿನಾಂಕ:25-10-2018 ರಂದು ಸುತ್ತೋಲೆ ನೀಡಲಾಗಿದೆ.

➢ ಸಾರ್ವಜನಿಕರಿಗೆ ಹೆಚ್1ಎನ್1 ಸೋಂಕಿನ ಬಗ್ಗೆ ಮಾಹಿತಿ ನೀಡಲು, ಆಕಾಶವಾಣಿ ಮತ್ತು ದೂರದರ್ಶನದಲ್ಲಿ ಪ್ರಚುರ ಪಡಿಸಲಾಗುತ್ತಿದೆ. ಜನಸಂದಣಿ ಇರುವ ರೈಲ್ವೆ ಮತ್ತು ಬಸ್ ನಿಲ್ದಾಣಗಳಲ್ಲಿ ಎಲೆಕ್ಟ್ರಾನಿಕ್ ಮೀಡಿಯಾ ಮುಖಾಂತರ ಮಾಹಿತಿ ಮತ್ತು ಆರೋಗ್ಯ ಶಿಕ್ಷಣ ನೀಡಲಾಗಿದೆ.

**ಸಾರ್ವಜನಿಕರ ತಿಳುವಳಿಕೆಗಾಗಿ ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬ ಮಾಹಿತಿಯನ್ನು IEC ಮೂಲಕ ತಿಳಿಸಲಾಗಿದೆ.**

ಏನು ಮಾಡಬೇಕು:-

- ಸೋಂಕು ಪೀಡಿತರ ಸಂಪರ್ಕದಿಂದ ದೂರವಿರುವುದು, ಶಂಕಿತ ರೋಗಿಯು ಮನೆಯಲ್ಲಿಯೇ ಪ್ರತ್ಯೇಕವಾಗಿರುವುದು.
- ವೈಯ್ಯಕ್ತಿಕ ಸ್ವಚ್ಚತೆ ಕಾಪಾಡಿಕೊಳ್ಳುವುದು. ವಿಶೇಷವಾಗಿ ಆಗಾಗ್ಗೆ ಸಾಬೂನಿನಿಂದ ಕೈ ತೊಳೆದುಕೊಳ್ಳುವುದು.
- ಕೆಮ್ಮುವಾಗ ಮತ್ತು ಸೀನುವಾಗ ಮಾಸ್ಕ್/ಕೈವಸ್ತ್ರ ಉಪಯೋಗಿಸುವುದು. ಉಸಿರಾಟದ ತೊಂದರೆಯಾದಲ್ಲಿ ತಕ್ಷಣ ವೈದ್ಯರ ಸಲಹೆ ಪಡೆಯುವುದು
- ಪೌಷ್ಟಿಕ ಆಹಾರಗಳನ್ನು ಉಪಯೋಗಿಸುವುದು, ಚೆನ್ನಾಗಿ ನಿದ್ದೆ ಮಾಡುವುದು, ಒತ್ತಡಗಳನ್ನು ನಿಭಾಯಿಸುವುದು

ಏನು ಮಾಡಬಾರದು:-

- ಸೋಂಕಿತರ ಕೈ ಕುಲುಕುವುದು, ಚುಂಬಿಸುವುದು ಮತ್ತು ಆಲಂಗಿಸಿಕೊಳ್ಳುವುದನ್ನು ಮಾಡಬಾರದು.
- ತಜ್ಞ ವೈದ್ಯರ ಸಲಹೆ ಇಲ್ಲದೆ ಔಷದೋಪಚಾರ ಮಾಡಬಾರದು.
- ಸಾರ್ವಜನಿಕ ಸ್ಥಳಗಳಲ್ಲಿ ಉಗುಳಬಾರದು. ಆಸ್ಪಿರಿನ್ ಮಾತ್ರೆಗಳನ್ನು ಮಕ್ಕಳಿಗೆ ನೀಡಬಾರದು.

*ಈ ಮೇಲಿನ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಲಾಗುತ್ತಿದ್ದು, ತೀವ್ರಾ ನಿಗಾವಣೆ ಮಾಡಲಾಗುತ್ತಿದೆ.*